

ಡಾ. ಎಸ್. ರಾಮಮೂರ್ತಿ

# 23-8-2018ರಿಂದ 29-8-2018ರ ವರೆಗೆ




ವಾರದ ಮಧ್ಯ ಭಾಗದವರೆಗೂ ಅನುಕೂಲ. ಬರಬೇಕಾದ ಹಣ ಬರುವುದು. ಸಮಯೋಚಿತ ಮಾತಿಗೆ ಪ್ರಶಂಸೆ. ಉದ್ಯೋಗದಲ್ಲಿ ಪ್ರಗತಿ. ಕುಟುಂಬದಲ್ಲಿ ಒಮ್ಮತ. ಪ್ರಯಾಣ ಸೌಖ್ಯ. ವಾರಾಂತ್ಯ ಒತ್ತಡ. ಸೋಮಾರಿತನ. ಕಾರ್ಯ ಕಲಾಪಗಳಲ್ಲಿ ಅಡಚಣೆ.

ಶುಭ ದಿನ: 26; ಲಕ್ಷ್ಮೀ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ




ಕೆಲಸ ಕಾರ್ಯಗಳು ತಡೆಯಿಲ್ಲದೆ ನಡೆಯುವುದು. ವ್ಯಾಪಾರದಲ್ಲಿ ನಿರೀಕ್ಷಿತ ಲಾಭ. ಹಿರಿಯರೊಂದಿಗಿನ ಸಮಾಲೋಚನೆಯಿಂದ ಧೈರ್ಯ. ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಕುಟುಂಬ ಸದಸ್ಯರಲ್ಲಿ ಒಮ್ಮತ ಉಂಟಾಗಿ ಸಂತಸವಾಗುವುದು.

ಶುಭ ದಿನ: 27; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಬೇಸರ. ಹಿರಿಯರ ಮೇಲೆ ಕೋಪ. ವೃತ್ತಿಯಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ಅಹಿತ ಭೋಜನ. ವಾರದ ಮಧ್ಯಭಾಗದಿಂದ ಅನುಕೂಲ. ಮನೋಬಲ ವೃದ್ಧಿ. ಹಿತೈಷಿಗಳ ಆಗಮನ. ಕೆಲಸ ಕಾರ್ಯಗಳಲ್ಲಿ ಯಶಸ್ಸು.

ಶುಭ ದಿನ: 26; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಅನುಕೂಲ. ಕಾರ್ಯಕಲಾಪಗಳಲ್ಲಿ ಸಫಲತೆ. ಲೇವಾದೇವಿಗಳಲ್ಲಿ ಸೂಕ್ತಲಾಭ. ಹಿತ ಸುದ್ದಿ. ವಾರದ ಮಧ್ಯಭಾಗದಲ್ಲಿ ಬೇಸರ. ಆರೋಗ್ಯ ವ್ಯತ್ಯಯ. ಉದ್ಯೋಗದಲ್ಲಿ ತಪ್ಪುಗಳಾಗುವಿಕೆ. ವ್ಯಾಪಾರದಲ್ಲಿ ಹಿನ್ನಡೆ. ವಾರಾಂತ್ಯ ಪ್ರಗತಿ.

ಶುಭ ದಿನ: 24; ಲಕ್ಷ್ಮೀ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ




ವಾರದ ಮಧ್ಯ ಭಾಗದವರೆಗೂ ಅನುಕೂಲ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ಆಪ್ತರಿಂದ ಸಹಾಯ. ಲೆಕ್ಕ ಪತ್ರ ವ್ಯವಹಾರಗಳಲ್ಲಿ ಸಫಲತೆ. ವಾರಾಂತ್ಯ ಆಲಸ್ಯ. ವೃತ್ತಿಯಲ್ಲಿ ತೊಡಗಲು ನಿರಾಸಕ್ತಿ. ಮುಖ್ಯ ಸಂದೇಶ ವಿಳಂಬ ಸಾಧ್ಯತೆ.

ಶುಭ ದಿನ: 25; ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ




ಉದ್ಯೋಗ ವೃತ್ತಿ ವ್ಯವಹಾರಗಳಲ್ಲಿ ಪ್ರಗತಿ. ಕುಟುಂಬ ಸದಸ್ಯರಿಂದ ಸಹಕಾರ. ಆತ್ಮೀಯರ ಭೇಟಿ. ನೂತನ ವ್ಯಾಪಾರ ಚಿಂತನೆ. ಶುಭ ಕಾರ್ಯಗಳಲ್ಲಿ ಆಸಕ್ತಿ. ದೀರ್ಘಕಾಲದ ಸಮಸ್ಯೆಗೆ ಪರಿಹಾರ. ಆಟ ಪಾಠಗಳಲ್ಲಿ ಮುನ್ನಡೆ. ವಿರೋಧಿಗಳು ತಟಸ್ಥರಾಗುವರು.

ಶುಭ ದಿನ: 26; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಭಯ. ಪೆಟ್ಟಾಗುವ ಸಾಧ್ಯತೆ. ಲೆಕ್ಕ ಪತ್ರಗಳಲ್ಲಿ ತಪ್ಪಾಗುವ ಸಂಭವ. ವೃತ್ತಿಗಳಲ್ಲಿ ಏನಾದರೊಂದು ಅಡಚಣೆ. ವಾರದ ಮಧ್ಯ ಭಾಗದಿಂದ ಸಮಾಧಾನ, ಒತ್ತಡ ನಿವಾರಣೆ. ಕೆಲಸ ಕಾರ್ಯಗಳಲ್ಲಿ ಯಶಸ್ಸು.

ಶುಭ ದಿನ: 26; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಅನುಕೂಲ. ಅಧ್ಯಯನದಲ್ಲಿ ಪ್ರಗತಿ. ಕಾರ್ಯ ಕಲಾಪಗಳಲ್ಲಿ ಸಫಲತೆ. ವ್ಯಾಪಾರದಲ್ಲಿ ನಿರೀಕ್ಷೆಯಂತೆ ಲಾಭ. ವಾರದ ಮಧ್ಯ ಭಾಗದಲ್ಲಿ ಆತಂಕ. ಗುರು ಹಿರಿಯರ ಭೇಟಿಗೆ ಅಡಚಣೆ. ವೃತ್ತಿ ವ್ಯವಹಾರಗಳಲ್ಲಿ ಒತ್ತಡ.

ಶುಭ ದಿನ: 24; ಗಣೇಶ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ಕೆಲಸ ಕಾರ್ಯಗಳು ಸಕಾಲಕ್ಕೆ ಮುಗಿದು ಮನಃಶಾಂತಿ ಹಾಗೂ ಧೈರ್ಯ ಪ್ರಾಪ್ತಿಯಾಗುವುದು. ವ್ಯವಹಾರಗಳಲ್ಲಿ ಸೂಕ್ತ ಲಾಭ ದೊರೆಯುವುದು. ಕುಟುಂಬ ಸದಸ್ಯರಲ್ಲಿ ಒಮ್ಮತದ ಅಭಿಪ್ರಾಯ ಮೂಡುವುದು. ದೇವತಾ ಕ್ಷೇತ್ರ ದರ್ಶನ ಸಫಲವಾಗುವುದು.

ಶುಭ ದಿನ: 27; ಗಣೇಶ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ. ಅಕಾಲ ಭೋಜನ. ಕಾರ್ಯ ಹಿನ್ನಡೆ. ಲೇವಾದೇವಿಗಳಲ್ಲಿ ಹಿನ್ನಡೆ. ಲೇವಾದೇವಿಗಳಲ್ಲಿ ಹಾನಿ. ವಾರದ ಮಧ್ಯದಿಂದ ಅನುಕೂಲ. ಸ್ಥಿರ ಮನಸ್ಸು, ಅಧ್ಯಯನದಲ್ಲಿ ಪ್ರಗತಿ. ಉದ್ಯೋಗದಲ್ಲಿ ಮುನ್ನಡೆ.

ಶುಭ ದಿನ: 27; ಶಿವ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಒತ್ತಡ. ಹಣದ ಸಮಸ್ಯೆ. ವೃತ್ತಿಯಲ್ಲಿ ಹಿನ್ನಡೆ. ವಿರೋಧಿಗಳಿಂದ ತೊಂದರೆ. ವಾರದ ಮಧ್ಯಭಾಗದಿಂದ ಚೇತರಿಕೆ. ಆತ್ಮಬಲ ಹೆಚ್ಚುವುದು. ಉದ್ಯೋಗದಲ್ಲಿ ಸಮಸ್ಯೆ ನಿವಾರಣೆ. ಅಧ್ಯಯನದಲ್ಲಿ ಮುನ್ನಡೆ. ಪ್ರಯಾಣ ಸೌಖ್ಯ.

ಶುಭ ದಿನ: 26; ದುರ್ಗಾ ಮತ್ತು ಗುರು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಂತಸ. ನಿರೀಕ್ಷೆಯಂತೆ ಕಾರ್ಯ ಸಾಧನೆ. ಲೇವಾದೇವಿಗಳಲ್ಲಿ ಲಾಭ. ಆಪ್ತರ ಭೇಟಿ. ಹಿತಕರ ಸುದ್ದಿ. ವಾರದ ಮಧ್ಯ ಭಾಗದಲ್ಲಿ ಚಂಚಲ ಮನಸ್ಸು. ಅನಾವಶ್ಯಕ ತಿರುಗಾಟ. ವೃತ್ತಿ– ವ್ಯವಹಾರಗಳಲ್ಲಿ ಅಶಾಂತಿ. ವಾಹನಗಳಿಂದ ತೊಂದರೆ.

ಶುಭ ದಿನ: 24; ಗುರು ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ

